**<u>ಸಾಕ್ಷಿಯನ್ನು ದಿನಾಂಕಃ 07-03-2026 ರಂದು ಕರೆಯಿಸಿ ಪ್ರಮಾಣ ವಚನ ನೀಡಲಾಯಿತು.</u>**

**<u>ಪಾಟೀಸವಾಲುಃ 3 ನೇ ಪ್ರತಿವಾದಿ ಪರ ವಕೀಲರವರಿಂದಃ</u>**

1. ನಾನು 5 ನೇ ತರಗತಿಯ ವರೆಗೆ ಓದಿದ್ದೇನೆ. ಈ ದಾವೆಯನ್ನು ಶಾಂತವೀರನಾಯ್ಕನು ಬೋಜರಾಜನ ಮೇಲೆ ಹಾಕಿರುವನು. ವಾದಿಯು ಜಮೀನಿನ ಸಂಬಂದ ಈ ಕೇಸನ್ನು ದಾಖಲಿಸಿರುವರು. ನನ್ನ ಸ್ವಂತ ಊರು ಉದ್ಗಟ್ಟಿ ತಾಂಡ ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ತೋರಿಸಿರುವುದಿಲ್ಲ. ನನ್ನ ಸ್ವಂತ ಊರು ದಾವಣಗೆರೆ ಜಿಲ್ಲೆಯ ಆಲೂರಹಟ್ಟಿ ಗ್ರಾಮ ಅಂದರೆ ಸರಿಯಲ್ಲ. ನಾನು OS No. 96/2018 ರಂತೆ ಪ್ರತಿವಾದಿಗಳ ವಿರುದ್ಧ ದಾವೆ ಮಾಡಿದ್ದೇನೆ ಅಂದರೆ ಸರಿ. ನಾನು ತಹಶಿಲ್ದಾರರು ವಾದಿಗೆ ನೀಡಿರುವ ಪಟ್ಟವನ್ನು ನೋಡಿದ್ದೇನೆ. ಆ ರೀತಿ ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ತಹಶಿಲ್ದಾರರರು ನಾನು ಹೇಳಿದಂತೆ ಯಾವುದೇ ಪಟ್ಟಾವನ್ನು ಮಂಜೂರು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

2. ದಾವಾ ಅಸ್ತಿಯ ಉತ್ತರ ದಿಕ್ಕಿಗೆ ಇರುವ ಜಮೀನನ್ನು ನನಗೆ ಸರ್ಕಾರವು ಪಟ್ಟಾ ಕೊಟ್ಟಿರುತ್ತದೆ. ಆ ಪಟ್ಟಾವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ನನ್ನ ತಂದೆಯ ಹೆಸರು ನಾಗ್ಯನಾಯ್ಕ ಎಂದು ಇರುವುದು. ವಾದಿಗಳು ಯಾವತ್ತೂ ದಾವಾ ಜಮೀನಿನ ಸ್ವಾಧೀನದಲ್ಲಿ ಇರಲಿಲ್ಲ ಮತ್ತು ಇಲ್ಲ

ಅಂದರೆ ಸರಿಯಲ್ಲ. ಶಾಂತವೀರನಯ್ಯಾನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀಸವಾಲುಃ 4 ನೇ ಪ್ರತಿವಾದಿ ಪರ ವಕೀಲರವರಿಂದಃ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸರಿಯಿದೆ.**

07-03-2026

**ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ. ಹರಪನಹಳ್ಳಿ**

**ಸಾಕ್ಷಿಯ ಸಹಿ** 07.03.2026